**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ356/2024

ಪಿಡಬ್ಲು :2 ಸಿಡಬ್ಲು :2

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ. ನಾಗನಗೌಡ ಪಾಟೀಲ |
| ತಂದೆಯ ಹೆಸರು | : | ಶ್ರೀ. ಶಂಕರಗೌಡ ಪಾಟೀಲ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ವರದಿಗಾರರು |
| ವಾಸ್ತವ್ಯ | : | ಕೋಳಗಿ, ಖಾನಾಪೂರ ತಾಲೂಕು |
| ದಿನಾಂಕ | : | 16-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು 3 ವರ್ಷಗಳಿಂದ ವರದಿಗಾರನಾಗಿ ಕೆಲಸ ಮಾಡುತ್ತಿದ್ದೇನೆ. 2024 ರಲ್ಲಿ ನಾನು ಕ್ರೈಮ ಫಾಯಿಲ್ ಎಂಬ ಪಾಕ್ಷಿಕ ಪತ್ರಿಕೆಯಲ್ಲಿ ವರದಿಗಾರನಾಗಿ ಕೆಲಸ ಮಾಡುತ್ತಿದ್ದೇನೆ. ಚಾಸಾ:7 ವಿಜಯ ಮಾದರ ಮತ್ತು ಅವರ ಮಗಳು ಚಾಸಾಃ 1 ಹರ್ಷಿತಾ ನನಗೆ ಗೊತ್ತಿರುತ್ತಾರೆ. ಚಾಸಾಃ 8 ದಯಾನಂದ ಅವರೂ ಸಹ ವರದಿಗಾರರಾಗಿದ್ದು, ನನಗೆ ಗೊತ್ತಿರುತ್ತಾರೆ.

2. ಚಾಸಾಃ 7 ರವರು ದಿನಾಂಕಃ 12-12-2023 ರಂದು ನನಗೆ ಪೋನ ಮಾಡಿ, ತಮ್ಮ ಮಗಳು ಚಾಸಾಃ 1 ರವರು ಮನೆಯಲ್ಲಿ ಇಲ್ಲ, ಅವಳು ಕಾಣೆಯಾಗಿದ್ದಾಳೆ ಎಂದು ಹೇಳಿದ್ದರು. ನಾನು ಅವರಿಗೆ ಪೋಲಿಸ ಠಾಣೆಗೆ ಹೋಗಿ ದೂರು ನೀಡುವಂತೆ ಹೇಳಿದ್ದೇನು. ಅವರು ಆ ಬಗ್ಗೆ ದೂರು ಕೊಟ್ಟಿದ್ದರು. ದೂರು ಕೊಟ್ಟ ಮರುದಿನ ತಮ್ಮ ಮಗಳು ಮನೆಗೆ ಬಂದಿದ್ದಾಳೆಂದು ಪುನಃ ನನಗೆ ಪೋನ ಮಾಡಿ ತಿಳಿಸಿದ್ದರು.

3. ದಿನಾಂಕಃ 12–03–2024 ರಂದು ಪೋಲಿಸರು ನನ್ನನ್ನು ಪೀರಣವಾಡಿಯ ಸರ್ಕಾರಿ ಶಾಲೆ ಮುಂಭಾಗದಲ್ಲಿರುವ, ಆಸ್ಪತ್ರೆಯ ಮುಂಭಾಗದಲ್ಲಿ ಗೋವಾ – ಬೆಳಗಾವಿ ರಸ್ತೆಗೆ ಬರುವಂತೆ ಪೋಲಿಸರು ಕರೆದಿದ್ದರು. ನಾನು ಅಲ್ಲಿಗೆ ಹೋದಾಗ ಸ್ಥಳದಲ್ಲಿ ಚಾಸಾಃ 1 ಹಾಜರು ಇದ್ದು, ಸ್ಥಳ ತೋರಿಸಿ, ಅಲ್ಲಿಂದ ಆರೋಪಿ ಮೋಟರಬೈಕನಲ್ಲಿ ಆಕೆಯನ್ನು ಪಾರ್ಲೆ ಗ್ರಾಮಕ್ಕೆ ಕರೆದುಕೊಂಡ ಹೋದ ಸ್ಥಳ ಎಂದು ತೋರಿಸಿದನು. ಪೋಲಿಸರು ಆ ಸ್ಥಳದಲ್ಲಿ ಮಧ್ಯಾಹ್ನ 02:30 ಗಂಟೆಗೆ ಪಂಚನಾಮೆ ಮಾಡಿರುತ್ತಾರೆ.

4. ಅಲ್ಲಿಂದ ಪೋಲಿಸರು ನನ್ನನ್ನು ಮಹಾರಾಷ್ಟ್ರದ ಕೊಲ್ಲಾಪೂರ ಜಿಲ್ಲೆಯ ಚಂದಗಡ ತಾಲೂಕಿನ ಪಾರ್ಲೆ ಗ್ರಾಮದಲ್ಲಿರುವ ಆರೋಪಿಯ ಚಿಕ್ಕಮ್ಮನ ಮನೆಗೆ ಚಾಸಾಃ1 ರವರಿಗೆ ಕರೆದುಕೊಂಡು ಹೋಗಿದ ಸ್ಥಳ ತೋರಿಸಿ, ಅಲ್ಲಿ ಆರೋಪಿ ಆಕೆಯನ್ನು ಎರಡು ದಿನ ಇರಿಸಿಕೊಂಡಿದ್ದನು ಎಂದು ಹೇಳಿದಳು. ಆಗ ಸಮಯ ಸಂಜೆ 04:00 ರಿಂದ 04:30 ಗಂಟೆ ಆಗಿತ್ತು. ಪೋಲೀಸರು ಅಲ್ಲಿ ಪಂಚನಾಮೆ ಮಾಡಿದರು. ಅಲ್ಲಿಂದ ಪುನಃ ಚಾಸಾಃ1 ರವರು ಪೋಲಿಸರನ್ನು ಮತ್ತು ನಮ್ಮನ್ನು ಬೆಳಗಾವಿಯ ಕೇಂದ್ರ ಬಸ್ ನಿಲ್ದಾಣಕ್ಕೆ ಕರೆದುಕೊಂಡು ಬಂದು ಸ್ಥಳ ತೋರಿಸಿ, ಆರೋಪಿ ಆಕೆಯನ್ನು ಪಾರ್ಲೆ ಗ್ರಾಮದಿಂದ ಬೈಕ್ ಮೇಲೆ ತಂದು ಬಿಟ್ಟನು ಎಂದು ಸ್ಥಳ ತೋರಿಸಿದರು. ಪೋಲಿಸರು ಆ ಸ್ಥಳದಲ್ಲಿ ಪಂಚನಾಮೆ ಮಾಡಿದರು. ಈ ಮೇಲೆ ಹೇಳಿದ ಮೂರು ಸ್ಥಳಗಳಲ್ಲಿ ಮಾಡಿದ ಪಂಚನಾಮೆಯನ್ನು ಒಂದೇ ದಾಖಲೆಯಲ್ಲಿ ಬರೆದಿದ್ದಾರೆ. ನಾನು ಅದಕ್ಕೆ ಸಹಿ ಮಾಡಿದ್ದೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ–2 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–2 (ಬಿ) ಎಂದು ಗುರುತಿಸಲಾಯಿತು.

5. ಪಂಚನಾಮೆ ಮಾಡಿದ ಮೂರು ಸ್ಥಳಗಳಲ್ಲಿ ತೆಗೆಯಲಾದ ಫೋಟೊಗಳನ್ನು ನೋಡಿ ಸಾಕ್ಷಿ ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ನಿಪಿ–3 ರಿಂದ ನಿಪಿ–8 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ. ಎ.ಸಿ.ಕೆ ವಕೀಲರಿಂದ</u>**

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.